## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** 1) ಶ್ರೀ ಎಂ.ಗಂಗಾದ್ರಿ, ಕಾರ್ಯದರ್ಶಿ, (2) ಶ್ರೀ ಪಿ.ಎಲ್.ಸುಬ್ರಮಣ್ಯಂ, ಹಿಂದಿನ ಕಾರ್ಯದರ್ಶಿ, (3) ಶ್ರೀ ಜಿ.ವಿ.ನಾರಾಯಣ, ಪಂ.ಅ.ಅ. ಮತ್ತು (4) ಶ್ರೀ ಕೆ.ಎನ್. ರಮೇಶ್, ಹಿಂದಿನ ಕಾರ್ಯದರ್ಶಿ, ಚೇಳೂರು ಗ್ರಾ.ಪಂ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರುಗಳ ವಿರುದ್ಧ ನಡವಳಿಕೆ – ಕುರಿತು.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಅ.ಸ.ಪ.ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ-4243/2014/ ಡಿಆರ್‌ಇ-1 ದಿನಾಂಕ:29-09-2016.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು-2 ರವರ ದಿನಾಂಕ:14-09-2016 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ಶ್ರೀ ಕೆ.ಕೇಶವಮೂರ್ತಿ ಬಿನ್ ನರಸಿಂಹಪ್ಪ, ಮೈಲಾಂಡ್ಲಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಸಲ್ಲಿಸಿರುವ ದೂರಿನಲ್ಲಿ, ಚೇಳೂರು ಗ್ರಾಮ ಪಂಚಾಯಿತಿಯ ಸ್ಥಳೀಯ ಲೆಕ್ಕಪರಿಶೋಧನಾ ವಲಯ, ಲೆಕ್ಕ ಪರಿಶೋಧನೆಯನ್ನು ಪೂರ್ಣಗೊಳಿಸಿ, ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳ ಕರ್ತವ್ಯದ ಅವಧಿಯಲ್ಲಿ ವಸೂಲಾತಿ ತೆರಿಗೆಯನ್ನು ಗ್ರಾಮ ಪಂಚಾಯಿತಿಯ ಸರ್ಕಾರಿ ಬ್ಯಾಂಕ್ ಖಾತೆಗೆ ಜಮಾ ಮಾಡದೆ ಇರುವ ಬಗ್ಗೆ ಆಕ್ಷೇಪಿಸಿರುತ್ತದೆ. ಈ ಬಗ್ಗೆ ಎದುರುದಾರರುಗಳು ಗ್ರಾಮ ಪಂಚಾಯಿತಿ ಬ್ಯಾಂಕ್ ಖಾತೆಗೆ ವಸೂಲಾತಿ ಮೊತ್ತ ಪಾವತಿಸದೆ ಕರ್ತವ್ಯಲೋಪಕ್ಕೆ ಗುರಿಯಾಗಿರುತ್ತಾರೆ. ಸರ್ಕಾರದ ನಿಧಿಯನ್ನು ಸ್ವಂತ ವ್ಯವಹಾರಗಳಿಗೆ ಬಳಕೆ ಮಾಡಿಕೊಂಡಿರುವುದು ದೃಢಪಟ್ಟಿರುತ್ತದೆಂದೂ, ಈ ವಿಷಯದಲ್ಲಿ ಗ್ರಾಮ ಪಂಚಾಯಿತಿಯ ಆಡಳಿತ ಮಂಡಳಿ ಆರೋಪಿತ ಸರ್ಕಾರಿ ನೌಕರರೊಂದಿಗೆ ಶಾಮೀಲಾಗಿ ಈ ಆರೋಪವನ್ನು ಕರವಸೂಲಾತಿಗಾರರಾದ ಶ್ರೀ ವಿ.ಆರ್. ರಹಮತುಲ್ಲಾ ರವರ ವಿರುದ್ಧ ಚಿಕ್ಕಬಳ್ಳಾಪುರ ಲೋಕಾಯುಕ್ತ ಕಛೇರಿಯಲ್ಲಿ ದೂರು ದಾಖಲಿಸಿ, ಲೋಕಾಯುಕ್ತ ಅಧಿಕಾರಿಗಳು ಯಾವುದೇ ಪರಿಶೀಲನೆ ನಡೆಸದೆ ಕರ್ತವ್ಯ ನಿರ್ವಹಣೆಯಲ್ಲಿ ಪಿ.ಡಿ.ಓ. ಶ್ರೀ ಜಿ.ವಿ.ನಾರಾಯಣರವರು, ಶ್ರೀ ವಿ.ಆರ್. ರಹಮತುಲ್ಲಾರವರಿಂದ ವಸೂಲಾತಿ ಮಾಡಬೇಕಾಗಿರುತ್ತದೆಂದು ಆರೋಪಿಸಿ ಆರೋಪದಿಂದ ಪಾರಾಗಿರುತ್ತಾರೆಂದೂ, ಕರ್ತವ್ಯಲೋಪದಿಂದ ವಿಮುಕ್ತಿಪಡೆದು ಅನಾವಶ್ಯಕವಾಗಿ ಶ್ರೀ ವಿ.ಆರ್. ರಹಮತುಲ್ಲಾರವರ ವಿರುದ್ಧ ಪ್ರಕರಣವನ್ನು ದಾಖಲಿಸಿ ಕರ್ತವ್ಯದಿಂದ ವಜಾಗೊಳಿಸಿರುತ್ತಾರೆ. ಸ್ಥಳೀಯ ಲೆಕ್ಕಪರಿಶೋಧನಾ ವರದಿಯಂತೆ ನಿಜವಾಗಿ ಕರ್ತವ್ಯಲೋಪ ಹಾಗೂ ಸರ್ಕಾರಿ ಹಣ ದುರುಪಯೋಗ ಪಡಿಸಿಕೊಂಡಿರುವ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ದೂರನ್ನು ಸಲ್ಲಿಸಿರುತ್ತಾರೆಂದೂ ಮಾನ್ಯ ಉಪಲೋಕಾಯುಕ್ತರು-2 ರವರ ವರದಿಯಲ್ಲಿ ತಿಳಿಸಿರುತ್ತಾರೆ.

ದೂರುದಾರರು ತನ್ನ ದೂರಿನ ಜೊತೆ ಹಾಜರುಪಡಿಸಿರುವ ಗ್ರಾಮ ಪಂಚಾಯಿತಿಯ ತೆರಿಗೆ ವಸೂಲಿ ಮತ್ತು ನಿಧಿಗೆ ಜಮಾ ವಿವರದ ತ:ಖ್ತೆಯನ್ನು ಪರಿಶೀಲಿಸಿದಾಗ, ಶ್ರೀ ಗಂಗಾಧರಪ್ಪ ಎನ್ನುವವರಿಗೆ ರೂ.42,714/-ಗಳನ್ನು ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಲು ಸೂಚಿಸಿರುತ್ತಾರೆ. 2010-11ನೇ ಸಾಲಿನಲ್ಲಿ ವಸಸೂಲಿಸಿದ ಗ್ರಾಮ ಪಂಚಾಯಿತಿ ತೆರಿಗೆಗಳ ಬಾಬ್ತು ರೂ.1,91,452/-ಗಳ ಕಡಿಮೆ ಮೊತ್ತ ನಿಧಿಗೆ ಜಮಾ ಆಗಿರುವುದರಿಂದ, ನಿಯಮ 25(1) ರಂತೆ ಶ್ರೀ ವಿ.ಆರ್. ರಹಮತುಲ್ಲಾ ಮತ್ತು ಶ್ರೀ ಸುಬ್ರಮಣ್ಯಂ ಇವರಿಂದ ವಸೂಲಿಸಿ, ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಲು ಸೂಚಿಸಲಾಗಿದೆ. ಕಂದಾಯ ವಸೂಲಿ ಮತ್ತು ಹರಾಜುಗಳಿಂದ ಬಂದ ವಸೂಲಿ ಜಮೆಗಳಲ್ಲಿ ವ್ಯತ್ಯಾಸವಿದ್ದು, ಕಡಿಮೆ ಇರಸಾಲು ಮಾಡಿರುವ ಮೊತ್ತವನ್ನು ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀ ಜಿ.ವಿ. ನಾರಾಯಣ, ಕಾರ್ಯದರ್ಶಿ ಶ್ರೀ ಕೆ.ಎನ್. ರಮೇಶ್, ಬಿಲ್ ಕಲೆಕ್ಟರ್ ರಹಮತುಲ್ಲಾ ಇವರುಗಳಿಂದ ರೂ.3,72,146/ಗಳನ್ನು ವಸೂಲಾತಿಗೆ ಸೂಚಿಸಿರುವುದು ಕಂಡುಬರುತ್ತದೆಂದು ಮಾನ್ಯ ಉಪಲೋಕಾಯುಕ್ತರು-2 ರವರ ರವರ ವರದಿಯಲ್ಲಿ ತಿಳಿಸಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, 1 ರಿಂದ 4ನೇ ಎದುರುದಾರರು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (ii) ಮತ್ತು (iii)ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ, ಸದರಿಯವರುಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14–ಎ ರಡಿಯಲ್ಲಿ ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಹಾಗೂ **1ನೇ ಎದುರುದಾರರಾದ ಶ್ರೀ ಎಂ. ಗಂಗಾದ್ರಿ, ಕಾರ್ಯದರ್ಶಿ, ಚೇಳೂರು ಗ್ರಾಮ ಪಂಚಾಯಿತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಈಗಾಗಲೇ ನಿವೃತ್ತಿಯಾಗಿರುವುದರಿಂದ,** ಸದರಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 214(2)(ಬಿ)(i)ರಂತೆ ಸರ್ಕಾರದ ಅನುಮತಿಯೊಂದಿಗೆ ಲೋಕಾಯುಕ್ತ ಕಛೇರಿಗೆ ಒಪ್ಪಿಸುವಂತೆ ಮಾನ್ಯ ಉಪಲೋಕಾಯುಕ್ತರು–2 ರವರು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರು–2 ರವರ ವರದಿಯನ್ನು ಪರಿಶೀಲಿಸಿ, ಈ ಪ್ರಕರಣದಲ್ಲಿ ಒಳಗೊಂಡಿರುವ 1) ಶ್ರೀ ಎಂ.ಗಂಗಾದ್ರಿ, ಕಾರ್ಯದರ್ಶಿ, (2) ಶ್ರೀ ಪಿ.ಎಲ್.ಸುಬ್ರಮಣ್ಯಂ, ಹಿಂದಿನ ಕಾರ್ಯದರ್ಶಿ, (3) ಶ್ರೀ ಜಿ.ವಿ.ನಾರಾಯಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು (4) ಶ್ರೀ ಕೆ.ಎನ್. ರಮೇಶ್, ಹಿಂದಿನ ಕಾರ್ಯದರ್ಶಿ, ಚೇಳೂರು ಗ್ರಾಮ ಪಂಚಾಯಿತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರುಗಳ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14–ಎ ರಡಿಯಲ್ಲಿ ಹಾಗೂ **1ನೇ ಎದುರುದಾರರಾದ ಶ್ರೀ ಎಂ. ಗಂಗಾದ್ರಿ, ಕಾರ್ಯದರ್ಶಿ, ಚೇಳೂರು ಗ್ರಾಮ ಪಂಚಾಯಿತಿ, ಬಾಗೇಪಲ್ಲಿ ತಾಲ್ಲೂಕು,** ಚಿಕ್ಕಬಳ್ಳಾಪುರ ಜಿಲ್ಲೆ ಇವರು **ಈಗಾಗಲೇ ನಿವೃತ್ತಿಯಾಗಿರುವುದರಿಂದ,** ಕರ್ನಾಟಕ ನಾಗರೀಕ ಸೇವಾ ನಿಯಮಗಳು 214(2)(ಬಿ)(i)ರ ಅಡಿಯಲ್ಲಿ ಪ್ರಕರಣವನ್ನು ಲೋಕಾಯುಕ್ತ ಕಛೇರಿಗೆ ವಹಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 679 ಗ್ರಾಪಂಕಾ 2016 ಬೆಂಗಳೂರು, ದಿನಾಂಕ:26–10–2016.**

**1)** ಶ್ರೀ ಎಂ.ಗಂಗಾದ್ರಿ, ಕಾರ್ಯದರ್ಶಿ, (2) ಶ್ರೀ ಪಿ.ಎಲ್.ಸುಬ್ರಮಣ್ಯಂ, ಹಿಂದಿನ ಕಾರ್ಯದರ್ಶಿ, (3) ಶ್ರೀ ಜಿ.ವಿ.ನಾರಾಯಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು (4) ಶ್ರೀ ಕೆ.ಎನ್. ರಮೇಶ್, ಹಿಂದಿನ ಕಾರ್ಯದರ್ಶಿ, ಚೇಳೂರು ಗ್ರಾ.ಪಂ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14–ಎ ರಡಿಯಲ್ಲಿ ಹಾಗೂ **1ನೇ ಎದುರುದಾರರಾದ ಶ್ರೀ ಎಂ. ಗಂಗಾದ್ರಿ, ಕಾರ್ಯದರ್ಶಿ, ಚೇಳೂರು ಗ್ರಾಮ ಪಂಚಾಯಿತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಈಗಾಗಲೇ ನಿವೃತ್ತಿಯಾಗಿರುವುದರಿಂದ,** ಕರ್ನಾಟಕ ನಾಗರೀಕ ಸೇವಾ ನಿಯಮಗಳು 214(2)(ಬಿ)(i)ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಲೋಕಾಯುಕ್ತ ಕಛೇರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ–8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ.ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.

2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಬಳ್ಳಾಪುರ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
6. ಶ್ರೀ ಎಂ.ಗಂಗಾದ್ರಿ, ಹಿಂದಿನ ಕಾರ್ಯದರ್ಶಿ(ನಿವೃತ್ತಿ), ಚೇಳೂರು ಗ್ರಾಮ ಪಂಚಾಯಿತಿ, (ಹಾಲಿ ಚೇಳೂರು ಗ್ರಾಮ & ಅಂಚೆ, ಬಾಗೇಪಲ್ಲಿ ತಾಲ್ಲೂಕು) ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
7. ಶ್ರೀ ಪಿ.ಎಲ್.ಸುಬ್ರಮಣ್ಯಂ, ಹಿಂದಿನ ಕಾರ್ಯದರ್ಶಿ, ಚೇಳೂರು ಗ್ರಾಮ ಪಂಚಾಯಿತಿ, ಬಾಗೇಪಲ್ಲಿ ತಾಲ್ಲೂಕು (ಹಾಲಿ ಬೀಚಗಾನಹಳ್ಳಿ ಗ್ರಾಮ ಪಂಚಾಯಿತಿ, ಗುಡಿಬಂಡೆ ತಾಲ್ಲೂಕು), ಚಿಕ್ಕಬಳ್ಳಾಪುರ ಜಿಲ್ಲೆ.
8. ಶ್ರೀ ಜಿ.ವಿ.ನಾರಾಯಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚೇಳೂರು ಗ್ರಾಮ ಪಂಚಾಯಿತಿ (ಹಾಲಿ ತಿಮ್ಮಂಪಲ್ಲಿ ಗ್ರಾಮ ಪಂಚಾಯಿತಿ), ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
9. ಶ್ರೀ ಕೆ.ಎನ್. ರಮೇಶ್, ಹಿಂದಿನ ಕಾರ್ಯದರ್ಶಿ, ಚೇಳೂರು ಗ್ರಾಮ ಪಂಚಾಯಿತಿ, ಬಾಗೇಪಲ್ಲಿ ತಾಲ್ಲೂಕು (ಹಾಲಿ ಆನೂರು ಗ್ರಾಮ ಪಂಚಾಯಿತಿ, ಶಿಡ್ಲಘಟ್ಟ ತಾಲ್ಲೂಕು) ಚಿಕ್ಕ ಬಳ್ಳಾಪುರ ಜಿಲ್ಲೆ.
10. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.